1	2	3
6.	ಬೀದರ್	820
7.	ಬಾಗಲಕೋಟೆ	1196
8.	ಬಿಜಾಪುರ	973
9.	ಚಿಕ್ಕಮಗಳೂರು	508
10.	ಚಿತ್ರದುರ್ಗ	689
11.	ಚಾಮರಾಜನಗರ	596
12.	ಧಾರವಾಡ	1012
13.	ದಾವಣಗೆರೆ	1242
14.	ಗದಗ	895
15.	ಗುಲ್ಬರ್ಗಾ	1498
16.	ಹಾಸನ	1161
17.	ಹಾವೇರಿ	916
18.	ಕೋಲಾರ	2265
20.	ಕೊಪ್ಪಳ	852
21.	ಮಂಡ್ಯ	1554
22.	ಕೊಡಗು	335
23.	ಮಂಗಳೂರು	627
24.	ಮೈಸೂರು	1581
25.	ರಾಯಚೂರು	641
26.	ಶಿವಮೊಗ್ಗ	975
27.	ತುಮಕೂರು	1370
28.	ಉಡುಪಿ	511
	ಒಟ್ಟು	**31525**

ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಹಳದಿ ಪಡಿತರ ಚೀಟಿ ವಿತರಣೆ

404 (3986) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧನ ಸಭಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಜನರಿಗೆ ಎ.ಪಿ.ಎಲ್ ಹಾಗೂ ಹಳದಿ ಪಡಿತರ ಚೀಟಿಗಳನ್ನು ಹಂಚಲಾಗಿದೆ?

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿರುವ ಹಲವಾರು ಬಡ ಕುಟುಂಬಗಳಿಗೆ ಕೊಳಚೆ ನಿವಾಸಿಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕ್ಷೇತ್ರದಲ್ಲಿರುವ ಎಲ್ಲಾ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 18,232 ಎ.ಪಿ.ಎಲ್ ಪಡಿತರ ಚೀಟಿ ಮತ್ತು 734 ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ / ಅಘೋಷಿತ ಕೊಳಚೆ ಪ್ರದೇಶದ ಅರ್ಹ ಬಿ.ಪಿ.ಎಲ್ ಕುಟುಂಬಗಳಿಗೆ ವಿತರಿಸಲಾಗಿದೆ.

ಆ) ಬಂದಿದೆ. ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ / ಅಘೋಷಿತ ಅರ್ಹ ಬಿ.ಪಿ.ಎಲ್ ಕೊಳಚೆ ನಿವಾಸಿಗಳಿಗೆ ವಿತರಿಸಲಾಗಿದೆ. ಆದರೆ ಕೊಳಚೆ ಪ್ರದೇಶದ ಹೊರಗಡೆ ವಾಸಿಸುತ್ತಿರುವ ಬಡವರಿಗೆ ಸಹ ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಸರ್ಕಾರ ತೀರ್ಮಾನಿಸಿದೆ ಹಳದಿ ಪಡಿತರ ಚೀಟಿಗಳಿಗಾಗಿ ಅರ್ಜಿಗಳನ್ನು ಪಡೆದುಕೊಳ್ಳಲಾಗಿದೆ.

ಇ) ಹೌದು.

ರಾಜ್ಯದಲ್ಲಿ ಕೃಷಿ ಸಂಸ್ಕರಣೆ ನಿಗಮದಿಂದ ಧಾನ್ಯಗಳ ಸಂಸ್ಕರಣೆ

408 (3691) : ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಸಂಸ್ಕರಣೆ ಮಾಡುವ ನಿಗಮಗಳ ಸಂಖ್ಯೆ ಎಷ್ಟು;

ಆ) ಈ ನಿಗಮದಲ್ಲಿ ಯಾವ ಯಾವ ಧಾನ್ಯಗಳನ್ನು ಸಂಸ್ಕರಣೆ ಮಾಡಲಾಗುವುದು; ಇದಕ್ಕೆ ತಗಲುವ ವೆಚ್ಚವೇನು;

ಇ) 2000–01, 2001–02, 2002–03 ನೇ ಸಾಲಿನವರೆವಿಗೂ ಕೃಷಿ ಸಂಸ್ಕರಣೆಗಾಗಿ ವೆಚ್ಚ ಮಾಡಿರುವ ಅನುದಾನವೆಷ್ಟು? ವಿವರ ಒದಗಿಸುವುದು;

ಶ್ರೀ ಜಿ. ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು)

ಅ) ಎರಡು

1. ಕರ್ನಾಟಕ ಕೃಷಿ ಕೈಗಾರಿಕಾ ನಿಗಮ
2. ಕರ್ನಾಟಕ ಆಗ್ರೋ ಕಾರ್ನ್ ಪ್ರಾಡೆಕ್ಟ್ಸ್ ಲಿಮಿಟೆಡ್.

ಆ)

	ನಿಗಮದ ಹೆಸರು	ಸಂಸ್ಕರಣೆ ಮಾಡುವ ಧಾನ್ಯ	ವೆಚ್ಚ
1.	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	ಹಣ್ಣುಗಳನ್ನು ಸಂಸ್ಕರಣೆ ಮಾಡಲಾಗುತ್ತಿದೆ.	ರೂ. 34000: ಟನ್
2.	ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್	ಮುಸುಕಿನ ಜೋಳ	ರೂ. 2000: ಟನ್